# ಆನ್‌ಲೈನ್ ಫ್ರಾಡ್ ಭೀತಿ !



**ಖಾತೆಯಲ್ಲಿನ ತಿಂಗಳ ಸಂಬಳ ಇದ್ದಕ್ಕಿದ್ದಂತೆ ಕಾಣೆಯಾಗಿಬಿಟ್ಟರೆ ಗತಿಯೇನು? ತುಟಿಗಳಲ್ಲಿ ನಗು ಅರಳಿಸುವ ಈ ಅನುಭವ ಕಥನದಲ್ಲಿ ಸಹೃದಯರಿಗೆ ಕಲಿಕೆಯ ಪಾಠವೂ ಇದೆ.**

■ ಗುರು ಪಿ.ಎಸ್.
ಕಲೆ: ಸಂತೋಷ್ ಸಸಿಹಿತ್ಲು

'ಹಾಳು ಮಾಡೇ ಬಿಟ್ರಾ? ನಾನು ಬೆವರು ಸುರಿಸಿ ದುಡಿದ ದುಡ್ಡು ರೀ ಅದು. ಒಂದು ತಿಂಗಳ ಸಂಬಳ ಪೂರ್ತಿ ಕಳ್ಳರ ಪಾಲು ಮಾಡಿದೀರಲ್ರೀ' ಹೆಂಡತಿ ಒಂದೇ ಸಮನೆ ಬೈಯುತ್ತಿದ್ದಳು. ವಾರದ ರಜೆ ಎಂದು ಮನೆಯಲ್ಲಿದ್ದವನು, 'ಏನೋ ಘನಂದಾರಿ' ಕೆಲಸ ಮಾಡುವ ಭರದಲ್ಲಿ ಎಡವಟ್ಟು ಮಾಡಿದ್ದೆ. ನನ್ನ ರಜಾದಿನ ಸಂಪೂರ್ಣವಾಗಿ ಹೆಂಡತಿಯ ಕೋಪಕ್ಕೆ 'ಬಲಿ'ಯಾಗಿತ್ತು!

ಹೆಂಡತಿಯ ಈ ಕೋಪದ ಹಿಂದೆ ದೊಡ್ಡ ಕಥೆಯೇ ಇದೆ !

ಶಿಕ್ಷಕಿಯಾಗಿರುವ ಪತ್ನಿಯ ವೇತನ ಹಾಕುವ ಬ್ಯಾಂಕ್ ಖಾತೆಯನ್ನು **(salary account)** ಅವರ ಶಾಲೆಯ ಮುಖ್ಯಶಿಕ್ಷಕರು ಬದಲಿಸಿದ್ದರು. ಅಂದರೆ, ಬ್ಯಾಂಕ್ ಬದಲಿಗೆ ಅಂಚೆ ಇಲಾಖೆಯಲ್ಲಿ ಖಾತೆ ತೆರೆದು, ಅವರ ಶಾಲೆಯ ಎಲ್ಲ ಶಿಕ್ಷಕ, ಸಿಬ್ಬಂದಿಯ ವೇತನ ಅದಕ್ಕೇ ಬರುವಂತೆ ವ್ಯವಸ್ಥೆ ಮಾಡಿದ್ದರು. ಮೊದಲೆಲ್ಲ ಖಾಸಗಿ ಬ್ಯಾಂಕ್‌ವೊಂದರಲ್ಲಿ ತೆಗೆದಿದ್ದ ಉಳಿತಾಯ ಖಾತೆಗೇ ವೇತನ ಬರುತ್ತಿದ್ದುದರಿಂದ, ಸಾಲದ 'ಇಎಂಐ' ಅದರಿಂದಲೇ ಕಡಿತಗೊಳ್ಳುತ್ತಿತ್ತು. ಹೀಗಾಗಿ, ಪತ್ನಿಯ ಖಾಸಗಿ ಬ್ಯಾಂಕ್‌ನ ಉಳಿತಾಯ ಖಾತೆಯಲ್ಲಿ ಹಣ ಇರಲೇಬೇಕಾಗಿತ್ತು.

ಅಂಚೆ ಇಲಾಖೆಯ ಖಾತೆಯ ಜೊತೆಗೆ ಡೆಬಿಟ್ ಕಾರ್ಡ್ ಅಥವಾ ಎಟಿಎಂ ಕಾರ್ಡ್ ಕೊಟ್ಟಿದ್ದರು. 'ಹೋಗ್ರಿ, ನನ್ನ ಎಟಿಎಂ ಕಾರ್ಡ್ ತೆಗೆದುಕೊಂಡು ಹೋಗಿ, ಪಿನ್ ಚೇಂಜ್ ಮಾಡಿಕೊಂಡು ಬನ್ನಿ ಎಂದು ಆದೇಶಿಸಿದಳು ವೈಫ್. ನನ್ನ ಹಣೆಬರಹಕ್ಕೆ ಅವತ್ತೂ ನನಗೆ ರಜೆ ಇದ್ದುದರಿಂದ 'ಆದೇಶ' ಪಾಲಿಸಲೇಬೇಕಿತ್ತು. ಸೀದಾ ಅಂಚೆ ಇಲಾಖೆಯ ಎಟಿಎಂಗೆ ಹೋಗಿ, ಲೆಟರ್‌ನಲ್ಲಿದ್ದ ನಾಲ್ಕು ಅಂಕಿಯ 'ಪಿನ್' ನಮೂದಿಸಿ, ಮತ್ತೆ ಹೊಸ 'ಪಿನ್' ದಾಖಲಿಸಿದೆ. **'Your pin has been changed successfully'** ಎಂಬ ಸಾಲುಗಳಿದ್ದ 'ರಿಸಿಪ್ಟ್' ತೆಗೆದುಕೊಂಡು, ಹಿಡಿದ ಕೆಲಸ ಯಶಸ್ವಿಯಾಗಿ ಪೂರೈಸಿದ 'ತೃಪ್ತಿ'ಯಲ್ಲಿ ಮನೆಗೆ ಬಂದು, ಹೆಂಡತಿಗೆ ವರದಿ ಒಪ್ಪಿಸಿದೆ.

'ಪೋಸ್ಟ್ ಆಫೀಸ್ ಖಾತೆಗೆ ದುಡ್ಡು ಹಾಕಿದ ತಕ್ಷಣ, ಅದನ್ನು ನನ್ನ ಬ್ಯಾಂಕ್ ಖಾತೆಗೆ ವರ್ಗಾಯಿಸಬೇಕಾಗುತ್ತೆ ರೀ... ಎಟಿಎಂನಿಂದ ದುಡ್ಡು ಬಿಡಿಸಿಕೊಂಡು ಬಂದು ಮತ್ತೆ, ಅದನ್ನ ಬ್ಯಾಂಕ್‌ಗೆ ಹೋಗಿ ಹಾಕೋ ಬದಲು, ಆನ್‌ಲೈನ್‌ನಲ್ಲಿಯೇ ಟ್ರಾನ್ಸ್‌ಫರ್ ಮಾಡೋ ರೀತಿ ವ್ಯವಸ್ಥೆ ಮಾಡಿ' ಎಂದಳು ಹೆಂಡತಿ.

'ಗೊತ್ತು ಸುಮ್ನಿರು ಮಾರಾಯ್ತಿ. ಅದೇನ್ ದೊಡ್ಡ ಕೆಲಸ. ಪ್ಲೇ ಸ್ಟೋರ್‌ನಲ್ಲಿ ಪೋಸ್ಟಲ್ ಡಿಪಾರ್ಟ್‌ಮೆಂಟ್‌ದು ಆ್ಯಪ್ ಡೌನ್‌ಲೋಡ್ ಮಾಡಿ, ಅಕೌಂಟ್ ಆ್ಯಕ್ಟಿವೇಟ್ ಮಾಡ್ಕೊಂಡ್ರೆ ಆಯ್ತು' ಎಂದೆ.

'ದುಡ್ಡಿನ ವಿಚಾರ, ಏನಾದರೂ ಎಡವಟ್ಟು ಮಾಡಿಬಿಟ್ಟಿರಾ' ಮತ್ತೆ ಎಚ್ಚರಿಸಿದಳು.

ನನಗೋ ಸಿಟ್ಟು ಬಂತು. 'ಏನ್ ದೊಡ್ಡ ಬ್ರಹ್ಮ ವಿದ್ಯೆ ಅದು. ನನಗೆ ಗೊತ್ತಿಲ್ವ' ಎನ್ನುತ್ತಾ, 'ಪ್ಲೇಸ್ಟೋರ್' ಓಪನ್ ಮಾಡಿದವನೇ **'postal department app'** ಎಂದು ಟೈಪ್ ಮಾಡಿದೆ. **'India post Mobile Banking'** ಎಂದಿದ್ದ ಆ್ಯಪ್‌ನ ಡೌನ್‌ಲೋಡ್ ಮಾಡಿಯೇ ಬಿಟ್ಟೆ. ಹೆಂಡತಿಯ ಅಕೌಂಟ್ ನಂಬರ್ ಟೈಪ್ ಮಾಡಿದರೆ, **'wrong credentials'** ಎಂದು ಬಂತು. ಪಕ್ಕದಲ್ಲಿಯೇ **'contact us'** ಎಂದು ಇತ್ತು. ಅಲ್ಲಿ, +91 80026 66868 ಎಂಬ ದೂರವಾಣಿ ಸಂಖ್ಯೆಯನ್ನೂ ಕೊಟ್ಟಿದ್ದರು. ಹಿಂದೆ ಮುಂದೆ ಯೋಚಿಸದೆ ಫೋನ್ ಮಾಡಿದೆ. ಅವತ್ತು ಎರಡನೇ ಶನಿವಾರ. ನಾನು ಕರೆಮಾಡಿದಾಗ ಸಂಜೆ 7 ಗಂಟೆ ಆಗಿತ್ತು. ವ್ಯಕ್ತಿಯೊಬ್ಬ ಹಿಂದಿಯಲ್ಲಿ ಮಾತನಾಡತೊಡಗಿದ. 'ಪಚಾಸ್ ರುಪೀಸ್ ಸರ್ವೀಸ್ ಚಾರ್ಜ್ ಲಗೇಗಾ' ಎಂದ. ನನಗೇಕೋ ಅನುಮಾನ ಬಂತು. ಇದ್ದಕ್ಕಿದ್ದಂತೆ ಕರೆ ಕಟ್ ಮಾಡಿದೆ. ಅನುಮಾನ ಪರಿಹರಿಸಿಕೊಳ್ಳಲು **True Caller**ನಲ್ಲಿ ಆ ದೂರವಾಣಿ ಸಂಖ್ಯೆಯನ್ನು ಹಾಕಿ ಪರೀಕ್ಷಿಸಿದೆ. ಈ ಸಂಖ್ಯೆಗೆ ಕರೆ ಮಾಡಿ, ದುಡ್ಡು ಹಾಕಿ ಮೋಸ ಹೋದ ನೂರಾರು ಜನರ ಸಂದೇಶಗಳು ಅಲ್ಲಿದ್ದವು!

'ನನ್ನ ಸಮಯ ಪ್ರಜ್ಞೆ ಹೇಗಿದೆ ನೋಡು. ಅವನು ಕೇಳಿದ್ದಂತೆ 50 ರೂಪಾಯಿ ಏನಾದರೂ ನಾನು ಹಾಕಿದ್ದರೆ, ನಿನ್ನ ಅಕೌಂಟ್‌ನಲ್ಲಿದ್ದ ದುಡ್ಡೆಲ್ಲ ಮಂಗಮಾಯ ಆಗುತ್ತಿತ್ತು. ಅದಕ್ಕೆ ಹೇಳೋದು, ತುಂಬಾ ಹುಷಾರಾಗಿರಬೇಕು ಅಂತ' ಎಂದು ಹೇಳುತ್ತಾ ನನ್ನ ಬೆನ್ನು ನಾನೇ ತಟ್ಟಿಕೊಂಡೆ !

'ನಿಮ್ಮ ಬುದ್ಧಿವಂತಿಕೆ ಬಹಳಷ್ಟು ಸಲ ನೋಡಿದ್ದೀನಿ.